ಮೈಸೂರ ಗೆಜೆಟ್ಟ.

ನಂ. 19 ಸರ್ಕಾರದಿಂದ ಘೋಷಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಮೇ ತಾ|| 9, ಸನ್ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜ್‌ರಿಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷಿಸರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್‌ನೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 17ನೇ ಏಪ್ರಿಲ್ 1885.

ನಂ. 12.—ಇದರಿಂದ ಸಮಸ್ತ ಜನಗಳ ತಿಳಿವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನೆಂದರೆ, ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ವೈ ೀ ತುರುಕರಹಳ್ಳಿ ಯೆಂಬ ಗ್ರಾಮದ ಹೆಸರನ್ನು ಮಲ್ಲಿಕಾರ್ಜುನಪುರ ಎಂಬದಾಗಿ ಬದಲಾಯಿಸಿ ಯಿರುತ್ತೆ.

ನಂ. 13.—ಸನ್ 1885ನೇ ಇಸವಿ ಜನವರೀ 29ನೇ ಮತ್ತು ಮಿನ 215ನೇ ನಂಬರುಳ್ಳ ಈ ಆಫೀಸು ಇಸ್ತಿಹಾರ್ ನಾಮೆಯಲ್ಲಿ ನಮೂದಾದ, ಅಸಿಸ್ಟೆಂಟ್ ಕಮ್ಮಿಷನ್ನರ್‌ಗಳು, ಮುನಸಿಫರುಗಳು, ಅಮಲ್ದಾರ್‌ರುಗಳು ಮತ್ತು ಡೆಪ್ಯೂಟಿ ಅಮಲ್ದಾರರುಗಳು ಇವರುಗಳ ಮೊ ಕರದಾತಿ ಬಗ್ಗೆ ಪರೀಕ್ಷೆಗಳನ್ನು ವಿಧಿಸುವ ರೂಲ್ಸಿನ 10ನೇ ಪ್ಯಾರಾದಲ್ಲಿನ ಅದರಡಿ ಕಂಡ ಬದಲಾವಣೆಯು ಸರ್ವರ ತಿಳಿವಳಿಕೆ ಬಗ್ಗೆ ಘೋಷಿಸ್ ಮೂಡಲ್ಪಟ್ಟಿರುತ್ತೆ:—

ಪ್ಯಾರಾ 10.—ಐದು ವರುಷಗಳಿಗೆ ಕಮ್ಮಿ ಯಿಲ್ಲದೆ ಸರ್ಕಾರ್ ನವಕರಿಯಲ್ಲಿರುವ ಅಥವಾ ಮೂಹೆಯೂನಾ 35 ರೂಪಾಯಿಗೆ ಕಮ್ಮಿ ಯಿಲ್ಲದ ತಲಬುಳುಳ್ಳ ಒಂದು ನವಕರಿಯನ್ನು ಸರ್ಕಾರದಲ್ಲಿ ಉಂಟಾಗಿರುವ ಯಾವ ಮನುಷ್ಯನಾಗಲಿ, ಅವನು ತನ್ನ ಕೆಲಸವನ್ನು ಚಟು

ಕರವಾಗಿ ಮಾಡಿರುತ್ತಾನೆಂಬದಕ್ಕೆ ತನ್ನ ಮೇಲ್ಪಟ್ಟ ಹುದ್ದೆದಾರನಿಂದ ಬಂದು ಸರಟಿಫಿಕೇಟ್ ಪಡೆದ ತರುವಾಯ, ಮೇಲೆ ಹೇಳಲ್ಪಟ್ಟ ಯಾವ ಪರೀಕ್ಷೆಯನ್ನಾಗಲಿ ಕೊಡುವ ಬಗ್ಗೆ ಅರ್ಜನಾಗಿರತಕ್ಕದ್ದು.

2. ಪರೀಕ್ಷೆಕೊಡತಕ್ಕವರು, ಮುಂದಿನ ವರುಷದ ಲಾಗಾಯಿತು ಪರೀಕ್ಷೆಗೆ ಬರಲು ಅಪ್ಪಣೆ ಬಗ್ಗೆ ತನ್ನ ದರಖಾಸ್ತುಗಳನ್ನು ಪ್ರಸಕ್ತವಾದ ರೂಲ್ಸಿನ 11ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ವಿದ್ಯಾ ಇಲಾಖೆ ಸೆಕ್ರಿಟೇರಿಯವರಿಗೆ ಕೊಡುವದಕ್ಕೆ ಬದಲಾಗಿ ಯಗ್ಜಾಮಿನರ್‌ಗಳ ಪೋರ್ಟ್‌ಫೊಲಿಯವರಿಗೆ ಕಳುಹಿಸತಕ್ಕದ್ದು.

ಉದಕಮಂಡಲ, ತಾರೀಖು 17ನೇ ಏಪ್ರೆಲ್ 1885.

ನಂ. 14.—ಅದರಿಂದ ನೋಟೀಸ್ ಕೊಡುವದೇನೆಂದರೆ, ಬೆಂಗಳೂರು ಯಗ್ಜಿಕ್ಯೂಟೀವ್ ಟ್ರೆಷರಿಸ್ ಪೋರ್ಟ್ಸ್ ಆಫೀಸರರಿಗೆ ದಂಡಿನ ನೌಕರೀ ಬಗ್ಗೆ ಭೋಯೀರುಗಳು ಬೇಕಾಗಿರುತ್ತೆ. ಸದರೀ ಜನಗಳಿಗೆ ಮೊಕರರಾತಿ ಲಾಗಾಯಿತು ಭತ್ತಾ ತಿಂಗಳಾಯಿ ಮೊಹಿಯೂನಾ 9 ರೂಪಾಯಿ ಮೇರಿಗೆ ಕೊಡಲ್ಪಡುವದಲ್ಲದೆ, ಫರ್ಲಾಟಿಯರ್ ಯಾನೆ ಸರಹದ್ದು ದಾಟಿದ ಮೇಲೆ ಶಾಖವಾದ ಉಡುಪು ಸಹ ಕೊಡಲ್ಪಡುವದು.

ನಂ. 15.— ಇದರಿಂದನೋಟೀಸ್ ಕೊಡುವದೇನೆಂದರೆ, ಬೆಂಗಳೂರು ಯಗ್ಜಿಕ್ಯೂಟೀವ್ ಟ್ರೆಷರಿಸ್‌ಪೋರ್ಟ್ಸ್ ಆಫೀಸರರು ದಂಡಿನ ನೌಕರೀ ಬಗ್ಗೆ ಉದ್ದೇಸಲ್ಪಟ್ಟ ಬೋಜೆ ಯತ್ತುಗಳ ಜಾಕರಿಗಾಗಿ ಜನಗಳನ್ನು ಮೊಕರರ್ರಾಡುತ್ತಾರೆ. ಸದರೀ ಜನಗಳಿಗೆ ಮೊಕರರಾತಿ ಲಾಗಾಯಿತು ಭತ್ತಾ ತಿಂಗಳಾಯಿ ಮಾಹೆಯೂನಾ 9 ರೂಪಾಯಿ ಮೇರೆ ಕೊಡಲ್ಪಡುವದಲ್ಲದೆ, ಫರ್ಲಾಟಿಯರ್ ಯಾನೆ ಸರಹದ್ದು ದಾಟಿದ ತರುವಾಯ ಶಾಖವಾದ ಉಡುಪು ಸಹ ಕೊಡಲ್ಪಡುವದು.

ತಾರೀಖು 20ನೇ ಏಪ್ರೆಲ್ 1885.

ನಂ. 16.—ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಾವರ್ಗಿಯು ಮಂಜೂರ್ಮಾಡಲ್ಪಟ್ಟಿರುವ ಗ್ರಾಮಗಳನ್ನು ತೋರಿಸುವ ಇದಕ್ಕೆ ಲಗತ್ತಾದ ತಖ್ತೆಯು ಸರ್ವಜನಗಳ ತಿಳಿವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

3ನೇ ಮದ್ದಿನಲ್ಲಿರುವ ಗ್ರಾಮಗಳು ಹುಲೀ ಕೇರಿರುವ ತಾಲ್ಲೂಕು.	ನಂಬರ್.	ಗ್ರಾಮಗಳು.	3ನೇ ಮದ್ದಿನಲ್ಲಿರುವ ಗ್ರಾಮಗಳು ಯಾವ ತಾಲ್ಲೂಕಿಗೆ ವರ್ಗ ಮಾಡಲ್ಪಡಬೇಕೆಂದು ಉದ್ದೇಸಿಸಲ್ಪಟ್ಟಿರ್ಥಯೋ ಆ ತಾಲ್ಲೂಕು.
1	2	3	4
ಅತ್ತಿಕುಪ್ಪಾ ..	1	ಸೂಗನಹಳ್ಳಿ	ಚನ್ನರಾಯಪಟ್ಣ
	2	ಸೊಣ್ಣೇನಹಳ್ಳಿ	ನಾಗಮಂಗಲ
	3	ಜುಮೇನಹಳ್ಳಿ	
ನಾಗಮಂಗಲ ..	4	ಚಿಕ್ಕಸಮುದ್ರ	ಅತ್ತಿಕುಪ್ಪಾ
	5	ಪಟ್ಟದಪುರ	
ಯಡತೊರೆ ..	6	ಕಟ್ಟಿಕ್ಯಾತನಹಳ್ಳಿ	ಪಿಟೋ
	7	ಬೆಲ್ಲೂರು	
	8	ಕಟಪುರ	

ತಾರೀಖು 22ನೇ ಏಪ್ರೆಲ್ 1885.

ನಂ. 22.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತು ಮಾಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ಗ್ರಾಮವು ವೃತ್ತಿವಾರಾಗಿ ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಳಿಗ್ಗೆ 11 ಘೆಂಟೆಗೆ ಹರಾಜು ಪರುವಾಗಿ ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು ಕಂದಾಯದ ಬಾಕಿ ವಸೂಲಾಗಬೇಕಾದ ವೃತ್ತಿಗಳು ಪ್ರಥಮತಃ ಹರಾಜು ಮಾಡಲ್ಪಟ್ಟು, ಆವುಗಳಿಂದ ಬಾಕೀ ಬರಬೇಕಾದ ಪೊಬಲಗು ಪೂರ್ತಿಯಾಗಿ ಹುಟ್ಟದೆ ಯಿರುವ ಪಕ್ಷಕ್ಕೆ ಪೂರಾ ಗ್ರಾಮವು ಹರಾಜ್ ಮಾಡಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಪೊಬಲಗ್ ವೈಕೀ ಬೇಕಾದಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಪೊಬಲಗ್ ವೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಬೇ ಇದ್ದರೆ, ಡಿಪಾಜಿಟ್ ಪೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಪೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಪೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವೆ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜವಾಬಿನಿನಲ್ಲಿ ತನಗೆ ಹಕ್ಕುಬೆಂಬ ಇತರ ಯಾವ ಮನುಷ್ಯನಾಗಲಿ, ಬಿಡ್ಡೀ ಯಾ ಇತರ ಖರೀದಿಗಳು ದೇವಿಲ್ ಕಂದಾಯದ ಬಾಕೀ ಪೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಪೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಹಶೀಲ್ದಾರ್ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆರ್ಡೆರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರ್‌ಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮ ಪರಾಟ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಬೆಂಗಳೂರು.	ಬೆಂಗಳೂರು.	ಜಾಲ್ಲಾ.	ಅರದೇಶಪಳ್ಳಿ	ವಲ್ಲಭಶಾಸ್ತ್ರಿ, ಇತರ 58 ಮಂದಿ	ಖುಂ. ಕೂ. ಪ 66 0 15	ರೂ. ಆ. ಪೈ. 640 15 3	ರೂ. ಆ. ಪೈ. 615 0 0	ರೂ. ಆ. ಪೈ. 401 13 2	ಮೇ ತಾರೀಖು 30 ರಲ್ಲು ಅಮಲ್ದಾರ್ರು ಕೋಲರು ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ.

ತಾರೀಖು 28ನೇ ಏಪ್ರೆಲ್ 1885.

ನಂ. 28—ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮೆಸ್ರ್ಸ್ ಜಿ. ಯಳ್ಳಪ್ಪ ಮೈಕಲ್ ಜಾರ್ಜಾಯನವರಿಗೆ 1885ನೇ ಇಸವಿ ಏಪ್ರೆಲ್ 5ನೇ ಮಾರ್ಚ್ಯಂ (ಕ್ಯಾಂಪ್) ನಂಬರ್89ನೇ ಇನ್ಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ 4 ದಿವಸಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ಏಪ್ರೆಲ್ 1885.

ನಂ. 29.—ತುರುವೆಕೆರೆ ಡೆಪ್ಯೂಟಿ ತಾಮಲ್ದಾರ್ ಮಿರ್ ನೈಜಾಮುದ್ದಿ ಅಲ್ಲಖಾಯವರಿಗೆ, 1884ನೇ ಇಸವಿ ಡಿಸಂಬರು 6ನೇ

ಮತ್ತುಂ 5065—107ನೇ ನಂಬರುಳ್ಳ ದಿವಾನರವರ ಪ್ರೊಸೀಡಿಂಗ್ಸ್‌ನಲ್ಲಿ ಘಾಯಿಷುದ 1ನೇ ರೂಲಿನ ಪ್ರಕರತ್ತುಗಳ ಪ್ರಕಾರ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ಏಪ್ರೆಲ್ 1885.

ನಂ. 30.—ಬ್ರಿಗೇಡ್ ಸರ್ಜನ್ ಜೆ. ಹೆಚ್‌ಡರ್ಸನ್, ಯುಂ. ಡಿ., ಯವರು 1885ನೇ ಇಸವಿ ಏಪ್ರೆಲ್ 27ನೇ ಮತ್ತುಂ ಮಧ್ಯಾನ್ಹಾ ತ್ಪೂರ್ವ ಮೈಸೂರು ಗವರ್ನಮೆಂಟ್ ಮ್ಯೂಜಿಯಂ ಚಾರ್ಜನ್ನು ಮೆ|| ಜೆ. ಕ್ಯಾಮರ್ನ್ ಯಫ್. ಯಲ್ ಯ್ಸ್. ಯವರಿಗೆ ವಪ್ಪಿಸಿರುತ್ತಾರೆ.

ನಂ. 31.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತ್ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾವ ಹರಾಜು ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖುಗಳಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಘುರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವವು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜಾಕ್ಕಾಜಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯುಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರ್‌ನೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪೂರ್ತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪೂರ್ತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಳಿ ಹರಾಜು ಹಾತಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ಪಡತಕ್ಕದ್ದು.

7. ಹರಾಜ್ ದಿವಾನರವರಿಂದ ಮುಂಜಾಕ್ಕಾಜಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪೂರ್ತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮಗಳು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬಿಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ.	ಗ್ರಾಮಗಳು.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿ ಯಾ ಬೆಲೆಯು.	ಸರಕಾರದ ಕೊಡಬೇಕಾದ ಕೈಪೆಟ್ಟು.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಮಗ್ಗೈರೆ.
			ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು. ತಾಲೂಕು. ಗ್ರಾಮ.	ಆಲದಹಳ್ಳಿ.	ಸುಬ್ಬಣ್ಣಶಾಸ್ತ್ರಿ, ಇತರ 18 ಮಂದಿ	31 2 4	234 3 10	229 14 0	640 11 7	ಜಪ್ತಿಟಿ ಅಮಲ್‌ದಾರ್ರ ರೂಬರೂ ಗ್ರಾಮದ ಮೊಕ್ತಾಂನಲ್ಲಿ 1885ನೇ ಇಸವಿ ಜೂನ್ 8ನೇ ಮೆರ್ಕುಮಿನಲ್ಲಿ.
	ಸಮುದ್ರವಳ್ಳಿ	ನರಸಿಂಹಶಾಸ್ತ್ರಿ, ಇತರ 3 ಮಂದಿ	23 4 1	150 6 5	147 6 4	826 5 2	ಡಿಟೋ ಡಿಟೋ ತಾರೀಖು 9ರಲ್ಲು.

ಪರಾ.—ಬರಬೇಕಾದ ಬಾಕಿಗೋಸ್ಕರ ಮೇಲ್ಕಂಡ ಗ್ರಾಮಗಳ ಕೆಲವು ವೃತ್ತಿಗಳು ಕಳೆದ ಸೆಪ್ಟಂಬರ್ ತಿಂಗಳು 2ನೇ ತಾರೀಖಿನಲ್ಲಿ ಹರಾಜು ಮಾಡಲ್ಪಟ್ಟವು, ಮೊದಲಿನ ಹರಾಜ್ ರದ್ದು ಮಾಡಿ ಹಾಲಿ ಪೂರಾ ಗ್ರಾಮಗಳು ಹರಾಜ್ ಮಾಡಲ್ಪಡುತವೆ.

ತಾರೀಖು 1ನೇ ಮೇ 1885.

ನಂ. 32.—ತುಮಕೂರು ತಾಲ್ಲೂಕು ಅಮಲ್‌ದಾರ್ ರಾಮಚಂದ್ರರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು, 1 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ತುಮಕೂರು ಡಿಸ್ಟ್ರಿಕ್ಟ್ ಆಫೀಸ್ ರವಿನ್ಯೂ ಶೆರಸ್ತೆದಾರ್ ಏ. ಸುಬ್ಬಯ್ಯನವರು, ರಾಮಚಂದ್ರರಾಯನ ಗೈರಹಾಜರೀಯಲ್ಲಿ ಯಾವತ್ತೊಂದು ಹುಕ್ಕುಂ ಕೊಡುವವರೆಗೆ, ಸದರೀ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮೊಜಿಸ್ಟ್ರೇಟರಾಗಿ ಆಕ್ಟ್ಯುವೂಡತಕ್ಕದ್ದು.

ನಂ. 33.—ಬೆಂಗಳೂರು ಡಿಸ್ಟ್ರಿಕ್ಟ್ ಅಡಿ ಕಮಿಷನರ್ ಮೆ|| ಇ. ತಿ. ಷಣ್ಮುಗವೇಲು ಪಿಳ್ಳೆಯವರು 1885ನೇ ಇಸವಿ ಏಪ್ರಿಲ್ 15ನೇ ಮತ್ತುಂ ಲಾಗಾಯಿತು ಆಫೀಸು ಅವರು ಅವನ್ನು ಉಪಯೋಗಿಸಿಕೊಂಡಿರ ಬಹುದಾದ ತಾರೀಖು ಲಾಗಾಯಿತು 14 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಮಾರ್ಚ್ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕದ್ದು.

2. ಅರ್ಜೀದಾರರು ಗುರುವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಹುಕ್ಕುಂ ಬನೋಜೀವ್,
ಆರ್. ವಿಜಯೀಂದ್ರರಾವ್,
ಸೆಕ್ರಿಟೇರಿ.